
# ಎಲ್ಲ ಭಗವದಿಚ್ಛೆ

**ಒಬ್ಬ ವ್ಯಕ್ತಿಯು** ಕಾಡಿನ ಪ್ರದೇಶದಲ್ಲಿ ಹೋಗುತ್ತಿದ್ದನು. ಸಂಜೆಯ ವೇಳೆ. ಕತ್ತಲೆ ಕವಿಯುವುದಕ್ಕೆ ಮುಂಚೆ ಮನೆ ತಲುಪಬೇಕೆಂದು ಬೇಗ ಬೇಗ ಹೆಜ್ಜೆ ಹಾಕುತ್ತಿದ್ದನು. ಹೀಗೆ ಮುಂದುವರಿಯುತ್ತಿರುವಾಗ ದೂರದಲ್ಲಿ ಒಂದು ಹುಲಿ ಕಾಣಿಸಿತು. ಇನ್ನೇನು ಮಾಡುವುದು? ಅದು ದಟ್ಟ ಅಡವಿ. ಆ ಕಡೆ ಈ ಕಡೆ ಎಲ್ಲೂ ಓಡಿ ತಪ್ಪಿಸಿಕೊಳ್ಳುವಂತಿರಲಿಲ್ಲ. ಬಂದ ದಾರಿಯಲ್ಲೇ ಹಿಂತಿರುಗಿ ಹೋಗಬೇಕು. ಅವನು ಹಿಂದಕ್ಕೆ ತಿರುಗಿ ಕೆಲವು ಹೆಜ್ಜೆ ಇಡುವುದರಲ್ಲಿಯೇ ಒಂದು ಒಂಟಿ ಸಲಗ ಕಾಣಿಸಿತು. ಬೇರೆ ದಾರಿ ಕಾಣದೆ ಪಕ್ಕದಲ್ಲಿದ್ದ ಒಂದು ಮರವನ್ನು ಹತ್ತುವುದಕ್ಕೆ ಹೋದನು. ಅದನ್ನು ಹತ್ತಬೇಕೆಂದು ತಲೆ ಎತ್ತಿ ಮರವನ್ನು ನೋಡುತ್ತಾನೆ, ಒಂದು ಘಟಸರ್ಪ ಕೊಂಬೆಯ ಮೇಲಿದೆ. ಈಗ ಅವನು ಸಂಪೂರ್ಣ ಹತಾಶನಾದ. ತನ್ನನ್ನು ರಕ್ಷಿಸಿಕೊಳ್ಳುವ ಯಾವ ಉಪಾಯವೂ ಅವನಿಗೆ ಹೊಳೆಯಲಿಲ್ಲ. ತಾನು ಹುಲಿಯ ಬಾಯಿಗೆ ತುತ್ತಾಗಬಹುದು, ಇಲ್ಲವೇ ಆನೆಯ ಕಾಲಿಗೆ ಬಲಿಯಾಗಬಹುದು ಎಂದು ಭಾವಿಸಿದನು.

ಜೀವನದ ಆಸೆಯನ್ನು ತೊರೆದನು. ದಾರಿಯ ಮಧ್ಯ ಸುಮ್ಮನೆ ನಿಂತುಬಿಟ್ಟನು. ಕಣ್ಣುಮುಚ್ಚಿಕೊಂಡು ದೇವರನ್ನು ಪ್ರಾರ್ಥಿಸುತ್ತ ಕೈಮುಗಿದುಕೊಂಡು ನಿಂತನು.



ಎಷ್ಟೋ ಸಮಯ ಹಾಗೆಯೇ ಕಳೆಯಿತು. ಏನೂ ಆಗಲಿಲ್ಲ. ಹುಲಿ ಅಥವಾ ಆನೆ ತನ್ನ ಹತ್ತಿರ ಬರುತ್ತಿರಬಹುದೆಂದು ಅವನು ಊಹಿಸುತ್ತಿದ್ದ. ಮುಚ್ಚಿದ ಕಣ್ಣನ್ನು ಅವನು ತೆರೆಯಲೇ ಇಲ್ಲ. ಬಹಳ ಕಾಲದ ನಂತರ ಅವನು ಭಯದಿಂದ ನಡಗುತ್ತ ನಿಧಾನವಾಗಿ ಕಣ್ಣನ್ನು ತೆರೆದನು. ಸುತ್ತಲೂ ನೋಡಿದನು. ಹುಲಿಯೂ ಇಲ್ಲ, ಆನೆಯೂ ಇಲ್ಲ, ಹಾವೂ ಇಲ್ಲ.

ಅವನಿಗೀಗ ಧೈರ್ಯ ಬಂತು. ದೇವರಿಗೆ ಕೃತಜ್ಞತೆಯನ್ನು ಅರ್ಪಿಸುತ್ತ ಸರಸರನೆ ಮನೆಯ ಕಡೆ ಹೊರಟನು.

ಹೀಗೆಯೇ ನಮ್ಮ ಜೀವನದಲ್ಲಿಯೂ ಅನೇಕ ಕಷ್ಟಗಳು ಬರುತ್ತವೆ. ಎತ್ತ ತಿರುಗಿದರೂ ಕಷ್ಟವು ಎದುರಾಗುತ್ತದೆ. ನಮ್ಮ ಎಲ್ಲ ಪ್ರಯತ್ನ ಮಾಡಿ, ಕೊನೆಗೆ ಎಲ್ಲ ಭಗವಂತನ ಇಚ್ಛೆ ಎಂದು ಸುಮ್ಮನಿದ್ದು ಬಿಡಬೇಕು. ಆಗ ಕಷ್ಟಗಳು ನಮಗರಿವಿಲ್ಲದಂತೆಯೇ ಎಲ್ಲೋ ಮಾಯವಾಗಿಬಿಡುತ್ತವೆ.

# ನಮಗೆ ನಾವೇ ಹೊಣೆ

**ಒಂದು ಶಾಲೆಯಲ್ಲಿ** ತರಗತಿ ನಡೆಯುತ್ತಿದೆ. ಉಪಾಧ್ಯಾಯರು ಉತ್ಸಾಹದಿಂದ ಪಾಠ ಮಾಡುತ್ತಿದ್ದಾರೆ. ವಿದ್ಯಾರ್ಥಿಗಳು ಕೂಡ ಆಸಕ್ತಿಯಿಂದ ಕೇಳುತ್ತಿದ್ದಾರೆ. ಆದರೆ ಒಬ್ಬ ವಿದ್ಯಾರ್ಥಿಗೆ ಪಾಠದ ಕಡೆ ಗಮನವಿರಲಿಲ್ಲ. ಅವನು ಏನೊ ಚೇಷ್ಟೆ ಮಾಡುತ್ತಿದ್ದ. ಉಪಾಧ್ಯಾಯರ ಗಮನ ಅವನ ಕಡೆ ಹರಿಯಿತು. ಅವರ ಉತ್ಸಾಹಕ್ಕೆ ಭಂಗವುಂಟಾಯಿತು. ಕೋಪ ನೆತ್ತಿಗೇರಿತು. ಆ ವಿದ್ಯಾರ್ಥಿಗೆ ಚೆನ್ನಾಗಿ ಬೈದು ಅವನನ್ನು ಬೆಂಚಿನ ಮೇಲೆ ನಿಲ್ಲಿಸಿದರು.

ಅವನ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ.